ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 02-11-2004

# *ಸ್ವ-ಉಪಕಾರಿಗಳಾಗಿ ಅಪಕಾರಿಗಳ ಮೇಲೂ ಸಹ ಉಪಕಾರ ಮಾಡಿ, ಸರ್ವಶಕ್ತಿ, ಸರ್ವಗುಣ ಸಂಪನ್ನ, ಗೌರವ ಕೊಡುವಂತಹ ದಾತರಾಗಿ*

(स्व-उपकारी बन अपकारी पर भी उपकार करो, सर्व शक्ति, सर्व गुण सम्पन्न सम्मान दाता बनो)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

- ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

- ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

- ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

- ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಸ್ನೇಹದ ಸಾಗರ ತನ್ನ ನಾಲ್ಕೂ ಕಡೆಯ ಸ್ನೇಹಿ ಮಕ್ಕಳನ್ನು ನೋಡಿ ಹರ್ಷಿತರಾಗುತ್ತಿದ್ದಾರೆ. ಸಾಕಾರ ರೂಪದಲ್ಲಿ ಸಮ್ಮುಖದಲ್ಲಿರಬಹುದು, ಸ್ಥೂಲರೂಪದಲ್ಲಿ ದೂರ ಕುಳಿತಿರುವ ಆದರೆ ಸ್ನೇಹಿಗಳಾಗಿದ್ದಾರೆ, ಎಲ್ಲರೂ ತಂದೆಯ ಹತ್ತಿರ ಕುಳಿತಿದ್ದೀರಿ ಎಂಬ ಅನುಭವವನ್ನು ಮಾಡಿಸುತ್ತಿದ್ದಾರೆ. ಪ್ರತಿಯೊಂದು ಮಗುವಿನ ಸ್ನೇಹ ತಂದೆಯ ಸಮೀಪದ ಅನುಭವವನ್ನು ಮಾಡಿಸುತ್ತಿದೆ. ತಾವೆಲ್ಲಾ ಮಕ್ಕಳು ಸಹ ತಂದೆಯ ಸ್ನೇಹದಲ್ಲಿ ಸಮ್ಮುಖಕ್ಕೆ ತಲುಪಿದ್ದೀರಿ. ಬಾಪ್‌ದಾದಾರವರು ನೋಡಿದರು ಪ್ರತಿಯೊಂದು ಮಗುವಿನ ಹೃದಯದಲ್ಲಿ ಬಾಪ್‌ದಾದಾರವರ ಸ್ನೇಹ ಸಮಾವೇಶವಾಗಿದೆ. ಪ್ರತಿಯೊಬ್ಬರ ಹೃದಯದಲ್ಲಿ **"ನನ್ನ ಬಾಬಾ"** ಎಂಬ ಸ್ನೇಹದ ಗೀತೆ ಮೊಳಗುತ್ತಿದೆ. ಸ್ನೇಹವೇ ಈ ದೇಹ ಮತ್ತು ದೇಹದ ಸಂಬಂಧದಿಂದ ಅತೀತರನ್ನಾಗಿ ಮಾಡುತ್ತದೆ. ಸ್ನೇಹವು ಮಾಯಾಜೀತರನ್ನಾಗಿ ಮಾಡುತ್ತದೆ. ಎಲ್ಲಿ ಹೃದಯದ ಸ್ನೇಹವಿರುತ್ತದೆಯೋ ಅಲ್ಲಿ ಮಾಯೆಯು ದೂರದಿಂದಲೇ ಓಡಿ ಹೋಗುತ್ತದೆ. ಸ್ನೇಹದ ಸಬ್ಜೆಕ್ಟ್ ನಲ್ಲಿ ಎಲ್ಲಾ ಮಕ್ಕಳು ಪಾಸ್ ಆಗಿದ್ದೀರಿ. ಒಂದಾಗಿದೆ ಸ್ನೇಹ ಮತ್ತೊಂದಾಗಿದೆ ಸರ್ವಶಕ್ತಿವಂತ ತಂದೆಯ ಮುಖಾಂತರ ಸರ್ವಶಕ್ತಿಗಳ ಖಜಾನೆ.

ಇಂದು ಬಾಪ್‌ದಾದಾರವರು ಒಂದು ಕಡೆ ಸ್ನೇಹವನ್ನು ನೋಡುತ್ತಿದ್ದಾರೆ, ಮತ್ತೊಂದು ಕಡೆ ಶಕ್ತಿಸೇನೆಯ ಶಕ್ತಿಗಳನ್ನು ನೋಡುತ್ತಿದ್ದಾರೆ. ಎಷ್ಟು ಸ್ನೇಹ ಸಮಾವೇಶವಾಗಿದೆಯೋ ಅಷ್ಟೇ ಸರ್ವ ಶಕ್ತಿಗಳು ಸಹ ಸಮಾವೇಶವಾಗಿವೆಯೇ? ಬಾಪ್‌ದಾದಾರವರು ಎಲ್ಲಾ ಮಕ್ಕಳಿಗೆ ಒಂದೇ ವಿಧವಾದ ಸರ್ವ ಶಕ್ತಿಗಳನ್ನು ಕೊಟ್ಟಿದ್ದಾರೆ, ಮಾಸ್ಟರ್ ಸರ್ವಶಕ್ತಿವಂತರನ್ನಾಗಿ ಮಾಡಿದ್ದಾರೆ. ಕೆಲವರನ್ನು ಸರ್ವ ಶಕ್ತಿವಂತರು, ಇನ್ನೂ ಕೆಲವರನ್ನು ಶಕ್ತಿವಂತರನ್ನಾಗಿ ಮಾಡಿಲ್ಲ. ತಾವೆಲ್ಲರೂ ಸಹ ತಮ್ಮ ಸ್ವಮಾನವನ್ನು ಮಾಸ್ಟರ್ ಸರ್ವಶಕ್ತಿವಾನ್ ಎಂದು ಹೇಳುತ್ತೀರಿ. ಅಂದಾಗ ಬಾಪ್‌ದಾದಾರವರು ನಾಲ್ಕೂ ಕಡೆಯ ಮಕ್ಕಳನ್ನು ಕೇಳುತ್ತಾರೆ, ಪ್ರತಿಯೊಬ್ಬರೂ ತಮ್ಮಲ್ಲಿ ಸರ್ವಶಕ್ತಿಗಳ ಅನುಭವವನ್ನು ಮಾಡುತ್ತಿದ್ದೀರಾ? ಸದಾ ಸರ್ವಶಕ್ತಿಗಳ ಮೇಲೆ ಅಧಿಕಾರವಿದೆಯೇ? ಸರ್ವ ಶಕ್ತಿಗಳು ಬಾಪ್‌ದಾದಾರವರ ವಾರಸತ್ವ(ಆಸ್ತಿ)ಯಾಗಿದೆ, ಅಂದಾಗ ತಮ್ಮ ಆಸ್ತಿಯ ಮೇಲೆ ಅಧಿಕಾರವಿದೆಯೇ? ಇದೇಯೇ ಅಧಿಕಾರ? ಟೀಚರ್ಸ್ ಹೇಳಿರಿ, ಅಧಿಕಾರವಿದೆಯೆ? ಯೋಚಿಸಿ ಹೇಳಿರಿ. ಪಾಂಡವರೇ ಅಧಿಕಾರವಿದೆಯೇ? ಸದಾ ಇದೆಯೇ ಅಥವಾ ಆಗಾಗ ಇದೆಯೇ? ಯಾವ ಸಮಯ ಯಾವ ಶಕ್ತಿಯ ಅವಶ್ಯಕತೆ ಇದೆಯೋ ಆ ಶಕ್ತಿಯು ಶಕ್ತಿ ಸೇನೆಯರಾದ ತಮ್ಮ ಆದೇಶದಿಂದ ಹಾಜರಾಗುತ್ತದೆಯೇ? ಸಮಯಕ್ಕೆ ಚಿತ್ತ ಪ್ರಭು!(ಹಾಜಿರ್, ಹೂಜೂರ್) ಮಾಡುತ್ತವೆಯೇ? ಯೋಚಿಸಿ, ನೋಡಿಕೊಳ್ಳಿರಿ- ಆರ್ಡರ್ ಮಾಡಿದಾಕ್ಷಣ ಶಕ್ತಿಯು ಚಿತ್ತ ಪ್ರಭು! ಎನ್ನಬೇಕು. ಯಾವ ಶಕ್ತಿಯನ್ನು ಆಹ್ವಾನ ಮಾಡಿದರೂ ಎಂತಹ ಸಮಯವೋ ಎಂತಹ ಪರಿಸ್ಥಿತಿಯೋ ಅಂತಹ ಶಕ್ತಿಯು ಕಾರ್ಯದಲ್ಲಿ ಬರಬೇಕು. ಅಂತಹ ಅಧಿಕಾರಿ ಆತ್ಮರಾಗಿದ್ದೀರಾ? ಏಕೆಂದರೆ ತಂದೆಯು ವಾರಸತ್ವವನ್ನು ಕೊಟ್ಟಿದ್ದಾರೆ ಮತ್ತು ನೀವು ಆ ವಾರಸತ್ವವನ್ನು ನಿಮ್ಮ ಸ್ವಂತ ಮಾಡಿಕೊಂಡಿದ್ದೀರಿ. ಸ್ವಂತವಾದ ವಸ್ತುಗಳ ಮೇಲೆ ಅಧಿಕಾರವಿರುತ್ತದೆ ಅಲ್ಲವೇ! ಯಾವ ಸಮಯ ಯಾವ ವಿಧಿಯ ಅವಶ್ಯಕತೆ ಇರುತ್ತದೆಯೋ ಆ ಸಮಯ ಅದು ಕಾರ್ಯದಲ್ಲಿ ಉಪಯೋಗವಾಗಬೇಕು. ಉದಾಹರಣೆಗೆ ನಿಮಗೆ ಸಮಾವೇಶದ ಶಕ್ತಿಯ ಅವಶ್ಯಕತೆಯಿದೆ ಮತ್ತು ಸಮಾವೇಶ ಮಾಡುವ ಶಕ್ತಿಗೆ ಆದೇಶ ಮಾಡಿದಿರಿ, ಆದೇಶವನ್ನು ಒಪ್ಪಿಕೊಂಡು ಚಿತ್ತ ಪ್ರಭು! ಎಂದು ಹಾಜರಾಗುತ್ತದೆಯೇ? ಯಾರಿಗಾಗುತ್ತದೆಯೋ ಅವರು ಕತ್ತನ್ನು ಅಲುಗಾಡಿಸಿ, ಕೈಯನ್ನು ಅಲುಗಾಡಿಸಿ. ಆಗಾಗ ಆಗುತ್ತದೆಯೇ ಅಥವಾ ಸದಾ ಇರುತ್ತದೆಯೇ? ಸಮಾವೇಶ ಮಾಡಿಕೊಳ್ಳುವ ಶಕ್ತಿ ಹಾಜರ್ ಆಗುತ್ತದೆ ಆದರೆ 10 ಸಲ ಸಮಾವೇಶ ಮಾಡಿಕೊಂಡಿರಿ ಮತ್ತು 11ನೇ ಸಲ ಸ್ವಲ್ಪ ಮೇಲೆ ಕೆಳಗೆ ಆಗುತ್ತದೆಯೇ? ಸದಾ ಮತ್ತು ಸಹಜವಾಗಿ ಹಾಜರಾಗಲಿ, ಸಮಯ ಕಳೆದ ನಂತರ ಬರುವುದಲ್ಲ, ಇದನ್ನು ಮಾಡಬೇಕೆಂದು ಯೋಚಿಸಿದ್ದೆ ಆದರೆ ಆಗಿ ಹೋಯಿತು, ಆ ರೀತಿ ಆಗಬಾರದು. ಇದನ್ನೇ ಸರ್ವಶಕ್ತಿಗಳ ಅಧಿಕಾರಿ ಎಂದು ಹೇಳಲಾಗುತ್ತದೆ. ಈ ಅಧಿಕಾರವನ್ನು ಬಾಪ್‌ದಾದಾರವರು ಎಲ್ಲರಿಗೂ ಕೊಟ್ಟಿದ್ದಾರೆ, ಆದರೆ ಸದಾ ಅಧಿಕಾರಿಗಳಾಗುವುದರಲ್ಲಿ ನಂಬರ್‌ವಾರ್ ಆಗಿಬಿಡುತ್ತದೆ. ಸದಾ ಮತ್ತು ಸಹಜವಿದೆಯೇ, ಸ್ವಭಾವಿಕವಾಗಿರಲಿ, ಸ್ವಭಾವ(ಸಂಸ್ಕಾರ)ವಾಗಿರಲಿ ಅದಕ್ಕೆ ವಿಧಿ-ತಂದೆಯನ್ನು ಪ್ರಭು ಎಂದು ಸಹ ಕರೆಯುತ್ತಾರೆ ಅಲ್ಲವೇ! ಅದೇ ರೀತಿಯಾಗಿ ಯಾವ ಮಕ್ಕಳಾದರೆ ಪ್ರತಿಯೊಂದು ಶ್ರೀಮತಕ್ಕೆ ಚಿತ್ತ ಪ್ರಭು! ಎಂದು ನಡೆಯುತ್ತಾರೆಯೋ ಅವರಿಗೆ ಸರ್ವಶಕ್ತಿಗಳು ಹಾಜರಾಗುತ್ತವೆ. ಪ್ರತಿಯೊಂದು ಆಜ್ಞೆಗೆ, ಪ್ರತಿಯೊಂದು ಹೆಜ್ಜೆಯಲ್ಲಿ ಚಿತ್ತ ಪ್ರಭು! ಎನ್ನಬೇಕು. ಒಂದು ವೇಳೆ ಪ್ರತಿಯೊಂದು ಶ್ರೀಮತವನ್ನು ಪಾಲಿಸದಿದ್ದರೆ ಪ್ರತಿಯೊಂದು ಶಕ್ತಿ ಪ್ರತಿಯೊಂದು ಸಮಯ ಹಾಜರಾಗುವುದಿಲ್ಲ ಒಂದು ವೇಳೆ ನೀವು ಆಗಾಗ ತಂದೆಯ ಶ್ರೀಮತ ಅಥವಾ ಆದೇಶವನ್ನು ಪಾಲನೆ ಮಾಡಿದರೆ ಶಕ್ತಿಗಳು ಸಹ ನಿಮಗೆ ಆಗಾಗ ನಿಮ್ಮ ಆದೇಶವನ್ನು ಪಾಲಿಸಿ ಹಾಜರಾಗುತ್ತವೆ.

ಹಾಜರಾಗಿರುತ್ತದೆ ಆದರೆ ಸಮಯಾನುಸಾರ ಅಧಿಕಾರಿಗೆ ಬದಲು ಅಧೀನವಾಗಿ ಬಿಡುತ್ತವೆ. ಬಾಪ್‌ದಾದಾ ಈ ಫಲಿತಾಂಶವನ್ನು ಪರಿಶೀಲಿಸಿದರು ಅಂದಾಗ ಏನನ್ನು ನೋಡಿದರು? ನಂಬರ್‌ವಾರ್ ಆಗಿದ್ದಾರೆ. ಎಲ್ಲರೂ ನಂಬರ್‌ವನ್ ಆಗಿಲ್ಲ, ನಂಬರ್‌ವಾರ್ ಇದ್ದಾರೆ ಮತ್ತು ಸಹಜವಾಗಿಲ್ಲ. ಆಗಾಗ ಸಹಜವಾಗುತ್ತದೆ, ಆಗಾಗ ಸ್ವಲ್ಪ ಕಷ್ಟದಿಂದ ಶಕ್ತಿಗಳು ಪ್ರತ್ಯಕ್ಷವಾಗುತ್ತದೆ.

ಬಾಪ್‌ದಾದಾರವರು ಪ್ರತಿಯೊಬ್ಬ ಮಗುವನ್ನು ತಂದೆಯ ಸಮಾನವಾಗಿ ನೋಡಲು ಬಯಸುತ್ತಾರೆ. ನಂಬರ್‌ವಾರ್ ಆಗಿ ನೋಡಲು ಬಯಸುವುದಿಲ್ಲ ಮತ್ತು ತಾವೆಲ್ಲರ ಲಕ್ಷ್ಯ ತಂದೆಯ ಸಮಾನರಾಗುವುದಾಗಿದೆ. ಸಮಾನರಾಗುವ ಲಕ್ಷ್ಯವಿದೆಯೇ ಅಥವಾ ನಂಬರ್‌ವಾರ್ ಆಗುವ ಲಕ್ಷ್ಯವಿದೆಯೇ? ಒಂದು ವೇಳೆ ಕೇಳಿದರೆ ಎಲ್ಲರೂ ಸಮಾನರಾಗಬೇಕು ಎಂದೇ ಹೇಳುತ್ತಾರೆ. ಅಂದಾಗ ಪರಿಶೀಲನೆ ಮಾಡಿಕೊಳ್ಳಿರಿ- ಸರ್ವಶಕ್ತಿಗಳು ಇವೆಯೇ? ಸರ್ವ ಎನ್ನುವ ಶಬ್ದವನ್ನು ಅಂಡರ್ ಲೈನ್ ಮಾಡಿ. ಸರ್ವ ಗುಣಗಳು ಇದೆಯೇ? ತಂದೆಯ ಸಮಾನ ಸ್ಥಿತಿ ಇದೆಯೇ? ಕೆಲವೊಮ್ಮೆ ಸ್ವಯಂನ ಸ್ಥಿತಿ, ಕೆಲವೊಮ್ಮೆ ಪರ-ಸ್ಥಿತಿ ವಿಜಯವನ್ನು ಪಡೆದುಕೊಳ್ಳುವುದಿಲ್ಲವೇ? ಪರಸ್ಥಿತಿ ಒಂದು ವೇಳೆ ವಿಜಯವನ್ನು ಪ್ರಾಪ್ತಿ ಮಾಡಿಕೊಂಡರೆ ಅದಕ್ಕೆ ಕಾರಣ ತಿಳಿದುಕೊಂಡಿದ್ದೀರಲ್ಲವೇ? ಸ್ಥಿತಿ ಬಲಹೀನವಾಗಿದ್ದಾಗ ಪರಿಸ್ಥಿತಿ ಯುದ್ಧ ಮಾಡುತ್ತದೆ. ಸದಾ ಸ್ವ ಸ್ಥಿತಿ ವಿಜಯಿ ಆಗಿರಲಿ ಅದಕ್ಕೆ ಸಾಧನವಾಗಿದೆ - **ಸದಾ ಸ್ವಮಾನ ಮತ್ತು ಸಮ್ಮಾನ (ಗೌರವ) ಇದರ ಬ್ಯಾಲೆನ್ಸ್**. ಸ್ವಮಾನಧಾರಿ ಆತ್ಮರು ಸ್ವತಹವಾಗಿಯೇ ಸನ್ಮಾನ (ಗೌರವ) ನೀಡುವ ದಾತಾರಾಗಿದ್ದಾರೆ. ವಾಸ್ತವವಾಗಿ ಯಾರಿಗಾದರೂ ಗೌರವವನ್ನು ಕೊಡುವುದು, ಕೊಡುವುದಲ್ಲ, ಗೌರವ ಕೊಡುವುದೆಂದರೆ ತೆಗೆದುಕೊಳ್ಳುವುದಾಗಿದೆ. ಗೌರವ ನೀಡುವವರೇ ಎಲ್ಲರ ಹೃದಯದಲ್ಲಿ ಸ್ವತಃ ಮಾನನೀಯವಾಗುತ್ತಾರೆ. ಬ್ರಹ್ಮಾಬಾಬಾರವರನ್ನು ನೋಡಿದ್ದೀರಾ- ಆದಿದೇವ್ ಆಗಿಯೂ, ಡ್ರಾಮಾದ ಫಸ್ಟ್ ಆತ್ಮನಾಗಿದ್ದರು ಸದಾ ಮಕ್ಕಳಿಗೆ ಗೌರವ ನೀಡಿದರು. ತಮಗಿಂತಲೂ ಹೆಚ್ಚು ಮಕ್ಕಳಿಗೆ ಆತ್ಮರ ಮೂಲಕ ಗೌರವವನ್ನು ಕೊಡಿಸಿದರು. ಇದರಿಂದಾಗಿ ಪ್ರತಿಯೊಂದು ಮಗುವಿನ ಹೃದಯದಲ್ಲಿ ಬ್ರಹ್ಮಾ ತಂದೆ ಗೌರವನಿಯರಾದರು. ಅಂದಾಗ ಮಾನ್ಯತೆ ನೀಡಿದರೋ ಅಥವಾ ಮಾನ್ಯತೆ ಪಡೆದುಕೊಂಡರೋ? ಗೌರವ ನೀಡುವುದು ಎಂದರೆ ಮತ್ತೊಬ್ಬರ ಹೃದಯದಲ್ಲಿ ಸ್ನೇಹದ ಬೀಜವನ್ನು ಬಿತ್ತುವುದಾಗಿದೆ. ಯಾವಾಗ ಆತ್ಮರಿಗೆ ಸ್ನೇಹದಿಂದ ಗೌರವವನ್ನು ನೀಡುತ್ತೀರೋ ಆಗ ವಿಶ್ವದ ಮುಂದೆ ವಿಶ್ವಕಲ್ಯಾಣಕಾರಿ ಆತ್ಮರಾಗಿ, ಆಗ ಅನುಭವ ಆಗುತ್ತದೆ.

ಬಾಪ್‌ದಾದಾ ನೋಡಿದರು ವರ್ತಮಾನ ಸಮಯದಲ್ಲಿ ಒಬ್ಬರಿಗೊಬ್ಬರು ಗೌರವವನ್ನು ಕೊಡುವ ಅವಶ್ಯಕತೆ ಇದೆ. ಗೌರವವನ್ನು ಕೊಡುವವರೇ ವಿಧಾತ ಆತ್ಮರಂತೆ ಕಾಣಿಸುತ್ತಾರೆ. ಗೌರವ ಕೊಡುವಂತಹವರೇ ಬಾಪ್‌ದಾದಾರವರ ಶ್ರೀಮತ (ಶುಭ ಭಾವನೆ, ಶುಭಕಾಮನೆ) ಒಪ್ಪಿಕೊಳ್ಳುವ ಆಜ್ಞಾಕಾರಿ ಮಕ್ಕಳಾಗಿದ್ದಾರೆ. ಗೌರವ ಕೊಡುವುದೇ ಈಶ್ವರೀಯ ಪರಿವಾರದ ಹೃದಯದ ಪ್ರೀತಿಯಾಗಿದೆ. ಗೌರವ ಕೊಡುವವರು ಸ್ವಮಾನದಲ್ಲಿ ಸಹಜವಾಗಿಯೇ ಸ್ಥಿತರಾಗುತ್ತಾರೆ. ಏಕೆ? ಯಾವ ಆತ್ಮರಿಗೆ ಗೌರವವನ್ನು ಕೊಡುತ್ತೀರೋ ಆ ಆತ್ಮರ ಮೂಲಕ ಆಶೀರ್ವಾದಗಳು ಹೃದಯದಿಂದ ಸಿಗುತ್ತವೆ, ಆಶೀರ್ವಾದಗಳ ಖಜಾನೆಯೂ ಸಹಜ ಮತ್ತು ಸ್ವತಹವಾಗಿ ಸ್ವಮಾನವನ್ನು ಸ್ಮೃತಿ ಮಾಡಿಸುತ್ತದೆ. ಇದಕ್ಕಾಗಿ

ಬಾಪ್‌ದಾದಾರವರು ನಾಲ್ಕೂ ಕಡೆಯ ಮಕ್ಕಳಿಗಾಗಿ ವಿಶೇಷವಾಗಿ ಅಂಡರ್ ಲೈನ್ ಮಾಡಿಸುತ್ತಿದ್ದಾರೆ **ಗೌರವವನ್ನು ಕೊಡುವಂತಹ ದಾತರಾಗಿ.**

ಬಾಪ್‌ದಾದಾರವರ ಬಳಿಗೆ ಯಾರೆಲ್ಲಾ ಮಕ್ಕಳು ಹೇಗೆಲ್ಲಾ ಬಂದಿದ್ದೀರಿ, ಬಲಹೀನತೆಗಳಿಂದ ಬಂದಿದ್ದೀರಿ, ಸಂಸ್ಕಾರಗಳ ವಶರಾಗಿ ಬಂದಿದ್ದೀರಿ, ಪಾಪಗಳ ಹೊರೆಯನ್ನು ಹೊತ್ತುಕೊಂಡು ಬಂದಿದ್ದೀರಿ, ಕಠಿಣವಾದ ಸಂಸ್ಕಾರಗಳನ್ನು ತೆಗೆದುಕೊಂಡು ಬಂದಿದ್ದೀರಿ, ಆದರೆ ಬಾಪ್‌ದಾದಾರವರು ಪ್ರತಿಯೊಂದು ಮಗುವನ್ನು ಯಾವ ದೃಷ್ಟಿಯಿಂದ ನೋಡಿದರು! ನನ್ನ ಅಗಲಿ ಹೋಗಿ ಸಿಕ್ಕಿರುವಂತಹ ಮುದ್ದಾದ ಮಕ್ಕಳು ಈಶ್ವರೀಯ ಪರಿವಾರದ ಮಗು, ಎಂದೇ ಗೌರವ ನೀಡಿದರು ಮತ್ತು ತಾವು ಸ್ವಮಾನಧಾರಿಗಳಾದಿರಿ. ಈ ರೀತಿ ಫಾಲೋ ಫಾದರ್ ಮಾಡಿರಿ. ಒಂದು ವೇಳೆ ಸಹಜವಾಗಿ ಸರ್ವಗುಣ ಸಂಪನ್ನರಾಗಲು ಬಯಸುತ್ತೀರೆಂದರೆ ಗೌರವ ನೀಡುವವರಾಗಿ. ತಿಳಿದುಕೊಂಡಿದ್ದೀರಾ. ಸಹಜವಾಗಿದೆಯಲ್ಲವೇ? ಅಥವಾ ಕಷ್ಟವೇ? ಟೀಚರ್ಸ್ ಏನೆಂದು ತಿಳಿದಿದ್ದೀರಿ? ಸಹಜವೇ? ಯಾರಿಗಾದರೂ ನೀಡುವುದು ಸಹಜವಲ್ಲವೇ, ಯಾರಿಗಾದರೂ ಕಷ್ಟವಿದೆಯೇ ಅಥವಾ ಎಲ್ಲರಿಗೂ ನೀಡುವುದು ಸಹಜವಾಗಿದೆಯೇ? ತಮ್ಮ ಟೈಟಲ್ ಆಗಿದೆ **ಸರ್ವ ಉಪಕಾರಿ**. ಅಪಕಾರ ಮಾಡುವವರ ಮೇಲೂ ಉಪಕಾರ ಮಾಡುವವರು. ಹಾಗಾದರೆ ಪರಿಶೀಲನೆ ಮಾಡಿಕೊಳ್ಳಿರಿ ಸರ್ವೋಪಕಾರಿಯ ದೃಷ್ಟಿ, ವೃತ್ತಿ, ಸ್ಮೃತಿ ಇರುತ್ತದೆಯೇ? ಅನ್ಯರ ಮೇಲೆ ಉಪಕಾರ ಮಾಡುವುದು, ಸ್ವಯಂನ ಮೇಲೆ ಉಪಕಾರ ಮಾಡಿಕೊಳ್ಳುವುದೇ ಆಗಿದೆ. ಹಾಗಾದರೆ ಏನು ಮಾಡಬೇಕು? ಗೌರವ ನೀಡಬೇಕಲ್ಲವೇ! ಇದರಿಂದಲೇ ಭಿನ್ನ-ಭಿನ್ನ ವಿಷಯಗಳನ್ನು ಧಾರಣೆ ಮಾಡಿಕೊಳ್ಳುವುದಕೋಸ್ಕರ ಯಾವ ಪರಿಶ್ರಮವನ್ನಾದರೆ ಪಡುತ್ತಿದ್ದೀರೋ ಅದರಿಂದಲೂ ಬಿಡಿಸಿಕೊಳ್ಳುತ್ತೀರಿ ಏಕೆಂದರೆ ಬಾಪ್‌ದಾದಾರವರು ನೋಡುತ್ತಿದ್ದಾರೆ, ಸಮಯದ ಗತಿಯು ತೀವ್ರವಾಗುತ್ತಾ ಹೋಗುತ್ತಿದೆ. ಸಮಯವು ಕಾಯುತ್ತಿದೆ, ಅಂದಾಗ ತಾವೆಲ್ಲರೂ ವ್ಯವಸ್ಥೆ (ಇಂತಜಾಮ್) ಮಾಡಿಕೊಳ್ಳಬೇಕು. ಸಮಯದ ಕಾಯುವಿಕೆಯನ್ನು ಸಮಾಪ್ತಿ ಮಾಡಬೇಕು. ಏನು ವ್ಯವಸ್ಥೆ ಮಾಡಿಕೊಳ್ಳಬೇಕು? ತಮ್ಮ ಸಂಪೂರ್ಣತೆ ಮತ್ತು ಸಮಾನತೆಯ ಗತಿ ತೀವ್ರ ಮಾಡಬೇಕು. ಮಾಡುತಿದ್ದೇನೆ ಅಲ್ಲ, ತೀವ್ರ ಗತಿಯನ್ನು ಚೆಕ್ ಮಾಡಿ, ತೀವ್ರಗತಿ ಇದೆಯೇ? ಬಾಕಿ ಸ್ನೇಹದಿಂದ ಹೊಸ ಹೊಸ ಮಕ್ಕಳು ಕೂಡ ಬಂದು ತಲುಪಿದ್ದೀರಿ, ಬಾಪ್‌ದಾದಾರವರು ಹೊಸ-ಹೊಸ ಮಕ್ಕಳನ್ನು ನೋಡಿ ಖುಷಿಯಾಗುತ್ತಾರೆ. ಒಳ್ಳೆಯದು.

**ಸೇವೆಯ ಟರ್ನ್ ಕರ್ನಾಟಕದವರದಾಗಿದೆ:** ಕರ್ನಾಟಕದವರು ನಿಂತುಕೊಳ್ಳಿರಿ. ಸೇವೆಯ ಗೋಲ್ಡನ್ ಚಾನ್ಸ್ ಗಾಗಿ ಶುಭಾಶಯಗಳು. ನೋಡಿ ಮೊದಲ ನಂಬರ್ ಪಡೆದಿರಿ ಅಂದಾಗ ಮೊದಲ ನಂಬರ್ ನಲ್ಲೇ ಇರಬೇಕಲ್ಲವೇ! ಪುರುಷಾರ್ಥದಲ್ಲಿ, ವಿಜಯಿಗಳಾಗುವುದರಲ್ಲಿ ಎಲ್ಲದರಲ್ಲೂ ಮೊದಲ ನಂಬರ್ ಪಡೆಯುವಂತವರು. ಎರಡನೇ ನಂಬರ್ ಅಲ್ಲ, ಮೊದಲ ನಂಬರ್. ಇದೆಯೇ ಧೈರ್ಯ! ಧೈರ್ಯವಿದೆಯೇ? ಅಂದಾಗ ಧೈರ್ಯ ತಮ್ಮದು ಮತ್ತು ಪದಮಗುಣ ಸಹಯೋಗ ತಂದೆಯದು. ಒಳ್ಳೆಯ ಚಾನ್ಸ್ ಪಡೆದಿದ್ದೀರಿ. ತಮ್ಮ ಪುಣ್ಯದ ಖಾತೆಯನ್ನು ಬಹಳ-ಬಹಳ ಜಮಾ ಮಾಡಿಕೊಂಡಿದ್ದೀರಿ. ಕರ್ನಾಟಕದವರು ಎಲ್ಲದರಲ್ಲೂ ಮೊದಲ ನಂಬರ್ ಪಡೆಯಬೇಕು. ಕರ್ನಾಟಕದವರು ದೊಡ್ಡ ಪ್ರೋಗ್ರಾಮನ್ನು ಮಾಡಿದ್ದೀರಾ? ಮಾಡಿದ್ದೀರಾ? ಏಕೆ ಮಾಡಲಿಲ್ಲ? ಕರ್ನಾಟಕ ಎಲ್ಲದರಲ್ಲಿಯೂ ಮೊದಲ ನಂಬರ್ ಪಡೆಯಬೇಕು. (ಬೆಂಗಳೂರಿನಲ್ಲಿ ಮಾಡುತ್ತೇವೆ ಎಂದು ಹೇಳಿದರು) ಯಾರಾದರೆ ದೊಡ್ಡ ಪ್ರೋಗ್ರಾಮ್ ಮಾಡಿದ್ದೀರೋ

ಅವರು ಕೈಯನ್ನು ಎತ್ತಿರಿ. (ಎಂಟರಿಂದ ಹತ್ತು ಆಗಿವೆ) ಬಾಪ್‌ದಾದಾ ದೊಡ್ಡ ಪ್ರೋಗ್ರಾಂಗೆ ದೊಡ್ಡದಾದ ಶುಭಾಶಯಗಳನ್ನು ಕೊಡುತ್ತಿದ್ದಾರೆ. ಏಕೆಂದರೆ ನಿಮ್ಮ ಪಟ್ಟಣದಲ್ಲಿ ಇನ್ಯಾರು ನಿಂದೆಯನ್ನು ಹಾಕುವುದಿಲ್ಲ. ದೊಡ್ಡ ಪ್ರೋಗ್ರಾಮ್ ನಲ್ಲಿ ನೀವು ಅಡ್ವರ್ಟೈಸ್ಮೆಂಟ್ ಸಹ ಮೀಡಿಯಾದ ಮೂಲಕ ಪೋಸ್ಟರ್ಗಳ ಮೂಲಕ ಹೀಗೆ ವಿಧ ವಿಧವಾದ ಸಾಧನಗಳ ಮೂಲಕ ಸೇವೆಯನ್ನು ಮಾಡುತ್ತಿದ್ದೀರಿ. ಆದ್ದರಿಂದ ನಿಂದೆಯು ಕಡಿಮೆಯಾಗಿ ಬಿಡುತ್ತದೆ. ಬಾಪ್‌ದಾದಾರವರಿಗೆ ಈ ಸೇವೆ ಇಷ್ಟವೇ. ಆದರೆ.. ಆದರೆ ಎಂದರೆ ಇನ್ನೂ ಏನೋ ಇದೆ. ದೊಡ್ಡ ಪ್ರೋಗ್ರಾಮ್ ಅಂತೂ ಮಾಡಿದ್ದೀರಿ ಅದಕ್ಕೆ ಶುಭಾಶಯಗಳು. ಆದರೆ ಪ್ರತಿಯೊಂದು ಪ್ರೋಗ್ರಾಮ್ ನ ಮೂಲಕ ಕಡಿಮೆಯಲ್ಲಿ ಕಡಿಮೆ 108ರ ಮಾಲೆ ತಯಾರಾಗಬೇಕು. ಆ ಸೇವೆ ಎಲ್ಲಿ ಆಗಿದೆ? ಕಡಿಮೆಯಲ್ಲಿ ಕಡಿಮೆ 108 ಹೆಚ್ಚು ಎಂದರೆ 16,000 ತಯಾರಾಗಬೇಕು ಇಷ್ಟು ಶಕ್ತಿಯನ್ನು ಉಪಯೋಗಿಸುತ್ತಿದ್ದೀರಿ, ಇಷ್ಟು ಧನವನ್ನು ಉಪಯೋಗಿಸುತ್ತಿದ್ದೀರಿ ಆದ್ದರಿಂದ ಅದರ ಫಲಿತಾಂಶದಲ್ಲಿ ಬಾಪ್‌ದಾದಾ ಕಡಿಮೆಯಲ್ಲಿ ಕಡಿಮೆ 108 ತಯಾರಾಗಬೇಕು ಎಂದುಕೊಳ್ಳುತ್ತಿದ್ದಾರೆ ಏಕೆಂದರೆ ಅವರ ಅಡ್ರೆಸ್ ನಿಮ್ಮ ಹತ್ತಿರ ಇರಬೇಕಲ್ಲವೇ. ದೊಡ್ಡ ಪ್ರೋಗ್ರಾಮ್ಸ್ ನಲ್ಲಿ ಯಾರನ್ನಾದರೆ ಕರೆಯುತ್ತೀರೋ ಅವರ ಪರಿಚಯವಿರುತ್ತದೆ. ಅವರನ್ನು ಮತ್ತೆ ಸಮೀಪಕ್ಕೆ ಕರೆ ತರಬೇಕು. ನಾವು ಮಾಡುವವರು ಎಂದಲ್ಲ ಅದಕ್ಕೆ ಫಲ ಬರಬೇಕಲ್ಲವೇ. ದೊಡ್ಡ ಪ್ರೋಗ್ರಾಮ್ಸ್ ಮಾಡುವವರೆಲ್ಲರೂ ಬಾಪ್‌ದಾದಾರವರಿಗೆ ಈ ಫಲಿತಾಂಶವನ್ನು ತೋರಿಸಬೇಕು. ಅವರು ಬೇರೆ ಬೇರೆ ಸೆಂಟರ್ ಗಳಿಗೆ ಹೋದರೂ ಯಾವ ಪಟ್ಟಣದವರಾದರೂ ಅಲ್ಲಿಗೆ ಹೋಗಬೇಕು. ಹೀಗೆ ಅವರು ಎಲ್ಲಿಗೆ ಹೋದರೂ ಫಲಿತಾಂಶ ಬರಬೇಕು. ಹೀಗೆ ಮಾಡುತ್ತೀರಲ್ಲವೇ? ಸ್ವಲ್ಪ ಗಮನವಿದ್ದರೆ ಬಂದುಬಿಡುತ್ತಾರೆ. 108 ಬರುವುದು ಕಷ್ಟವೇನಲ್ಲ. ಕಡಿಮೆಯಲ್ಲಿ ಕಡಿಮೆ ಅವರು ಸ್ಟೂಡೆಂಟಾದರೂ ಆಗಬೇಕು. ಈ ಫಲಿತಾಂಶವನ್ನು ಬಾಪ್‌ದಾದಾ ನೋಡಬೇಕೆಂದುಕೊಳ್ಳುತ್ತಿದ್ದಾರೆ. ಸಹಯೋಗದಲ್ಲಿ ಮುಂದಕ್ಕೆ ಬರಬೇಕು ಆದ್ದರಿಂದ ಈ ಸೀಸನ್ ನಲ್ಲಿ ಬಾಪ್‌ದಾದಾ ಈ ಫಲಿತಾಂಶವನ್ನು ನೋಡಬೇಕೆಂದುಕೊಳ್ಳುತ್ತಿದ್ದಾರೆ ಒಳ್ಳೆಯದೇ ಅಲ್ಲವೇ? ಪಾಂಡವರು ಚೆನ್ನಾಗಿದ್ದೀರಾ, ಯಾರು ನಂಬರ್ವನ್ ಆಗುತ್ತಾರೆಯೋ ನೋಡುತ್ತೇನೆ. ಎಷ್ಟು ಜನರನ್ನಾದರೂ ತಯಾರು ಮಾಡಿ ಆದರೆ ತಯಾರು ಮಾಡಬೇಕು. ಪ್ರೋಗ್ರಾಮನ್ನಂತೂ ಮಾಡುತ್ತಿದ್ದೀರಿ ಆದರೆ ನಂತರ ಸಂಪರ್ಕದಲ್ಲಿ ತರುವುದರಲ್ಲಿ ಗಮನ ಕಡಿಮೆಯಾಗಿ ಬಿಡುತ್ತಿದೆ. ತರುವುದೇನು ಕಷ್ಟವಲ್ಲ ಬಾಪ್‌ದಾದಾ ಮಕ್ಕಳ ಧೈರ್ಯವನ್ನು ನೋಡಿ ಖುಷಿಪಡುತ್ತಿದ್ದಾರೆ. ಅರ್ಥವಾಯಿತೆ! ಒಳ್ಳೆಯದು.

ಇಂಡೋರ್ ಹಾಸ್ಟೆಲ್ ಮತ್ತು ಸಭೆಯಲ್ಲಿರುವ ಕುಮಾರಿಯರೊಂದಿಗೆ ಬಾಪ್‌ದಾದಾ ಮಾತನಾಡುತ್ತಿದ್ದಾರೆ. ಬಹಳ ಒಳ್ಳೆಯದು ಎಷ್ಟು ಜನ ಕುಮಾರಿಯರು ಬಂದಿದ್ದಾರೆಯೋ ಅವರಲ್ಲಿ ಎಷ್ಟು ಜನ ಸಹಯೋಗಿಗಳಾಗುತ್ತೀರಿ? ಕುಮಾರಿಯರು ಬಾಪ್‌ದಾದಾರವರ ರೈಟ್ ಹ್ಯಾಂಡ್ ಆಗಬಲ್ಲರು. ಸುವರ್ಣ ಅವಕಾಶವಿದೆ. ಎಷ್ಟು ಜನರಿದ್ದಾರೆ? ಎಷ್ಟು ಜನ ಕುಮಾರಿಯರಿದ್ದಾರೆ ತಿಳಿದಿದೆಯೇ? ಇವರ ಹೆಸರುಗಳನ್ನು ನೋಟ್ ಮಾಡಿಕೊಳ್ಳಿ ಇವರಲ್ಲಿ ಎಷ್ಟು ಜನ ಕುಮಾರಿಯರು ರೈಟ್ ಹ್ಯಾಂಡ್ ಆಗಿದ್ದಾರೆ ಎಂಬ ಫಲಿತಾಂಶ ನೋಡಬೇಕು. ಕೈಯನ್ನು ಎತ್ತಿರಿ. ಸೆಂಟರ್ಸ್ ನಲ್ಲಿ ಇರುವವರಲ್ಲ, ರೈಟ್ ಹ್ಯಾಂಡ್ ಆಗುತ್ತೇವೆ ಎನ್ನುವವರು. ಇವರ ವಿಡಿಯೋ ತೆಗೆಯಿರಿ. ಏಕೆಂದರೆ ನಿಮಗೂ ತಿಳಿದಿದೆ ಸೇವಾ ಕೇಂದ್ರಗಳನ್ನು ತೆಗೆಯಲು ಬಹಳಷ್ಟು ಜನ ಆಹ್ವಾನಿಸುತ್ತಿದ್ದಾರೆ ಆದರೆ ಸಹಯೋಗಿಗಳು ಕಡಿಮೆ ಇದ್ದಾರೆ. ನಿಮ್ಮನ್ನು ಕೇಳುತ್ತಾರೆ ಆದ್ದರಿಂದ ಕುಮಾರಿಯರು ವೇಗವಾಗಿ ಸೇವೆಗೆ ರೈಟ್ ಹ್ಯಾಂಡ್ ಆಗಬೇಕು. ಚಿಕ್ಕ ಚಿಕ್ಕ

ವಿಷಯಗಳನ್ನು ಬಿಟ್ಟುಬಿಡಿ ಆದರೆ ಯಾರಾದರೆ ಸೇವೆಯನ್ನು ಮಾಡುತ್ತಿದ್ದೀರೋ ಅವರು ಸಮಯವನ್ನನುಸರಿಸಿ ವೇಗವಾಗಿ ತಯಾರಾಗಬೇಕು.

ಒಳ್ಳೆಯದು ವರದಕ್ಷಿಣೆ ಸಹ ತಯಾರಾಗಿದೆ. ಸೆಂಟರ್ ವರದಕ್ಷಿಣೆಯಾಗಿದೆ. ವರನೂ ಸಹ ಇದ್ದಾನೆ ಮತ್ತು ವರದಕ್ಷಣೆಯು ಸಹ ತಯಾರಾಗಿದೆ. ಆದ್ದರಿಂದ ನೀವು ತಯಾರಾಗಿರಿ. ದೊಡ್ಡ ದೊಡ್ಡವರು ಬರಬಲ್ಲರಲ್ಲವೇ ಆದ್ದರಿಂದ ವೇಗವಾಗಿ ಬರುವವರು ಕೈಯನ್ನು ಎತ್ತಿರಿ! ಎಷ್ಟು ಜನ ಕುಮಾರಿಯರು ಕೈಯನ್ನು ಎತ್ತುತ್ತಿದ್ದಾರೆಯೋ ನೋಡಿರಿ. ವಿಡಿಯೋ ತೆಗೆಯುತ್ತಿದ್ದಾರೆ. ಒಳ್ಳೆಯದು, ಶುಭಾಶಯಗಳು ಮೊದಲೇ ಶುಭಾಶಯಗಳನ್ನು ಕೊಡುತ್ತಿದ್ದೇನೆ, ಒಳ್ಳೆಯದು.

ಎಲ್ಲಾ ಕಡೆಯಿಂದ ಸ್ನೇಹಿ ಮಕ್ಕಳು ಬಾಪ್‌ದಾದಾರವರನ್ನು ಮನಸ್ಸಿನಲ್ಲಿ ನೆನಪು ಮಾಡುತ್ತಿದ್ದಾರೆ. ಉತ್ತರಗಳ ಮೂಲಕ ಈಮೆಲ್ಸ್ ಗಳ ಮೂಲಕ ಪ್ರಿಯ ಸ್ಮೃತಿಗಳನ್ನು ಕಳುಹಿಸುತ್ತಿದ್ದಾರೆ. ಆ ಮಕ್ಕಳೆಲ್ಲರಿಗೂ ಬಾಪ್‌ದಾದಾ ದೂರದಿಂದಲೇ ನೋಡುವುದಲ್ಲ, ಆದರೆ ತನ್ನ ಹೃದಯ ಸಿಂಹಾಸನದಲ್ಲಿ ನೋಡುತ್ತಿದ್ದಾರೆ. ಎಲ್ಲದಕ್ಕಿಂತಲೂ ಸಮೀಪವಾದದ್ದು ಹೃದಯ. ಯಾರಾದರೆ ಮನಸ್ಸಿನಿಂದ ಪ್ರಿಯಸ್ಮೃತಿಗಳನ್ನು ಕಳುಹಿಸಿದ್ದಾರೆಯೋ ಅವರಿಗೆ ಬಾಪ್‌ದಾದಾ ಪ್ರಿಯ ಸ್ಮೃತಿಗಳನ್ನು ಕಳುಹಿಸುವುದೇ ಅಲ್ಲ, ತನ್ನ ಹೃದಯ ಸಿಂಹಾಸನದಲ್ಲಿ ನೋಡುತ್ತಿದ್ದಾರೆ. ತಿರುಗಿ ಉತ್ತರವನ್ನು ಸಹ ಕೊಡುತ್ತಿದ್ದಾರೆ. ದೂರವಾಗಿ ಕುಳಿತಿರುವಾಗಲೂ **ನಂಬರ್‌ವನ್ ತೀವ್ರ ಪುರುಷಾರ್ಥಿ ಭವ!**

ಈಗ ಎಲ್ಲರೂ ಒಂದು ಸೆಕೆಂಡಿನಲ್ಲಿ, ಒಂದು ಸೆಕೆಂಡ್ ಒಂದು ನಿಮಿಷವಲ್ಲ, ಒಂದು ಸೆಕೆಂಡ್ ನಲ್ಲಿ **"ನಾನು ಫರಿಶ್ತಾದಿಂದ ದೇವತೆ ಆಗಿದ್ದೇನೆ"** - ಈ ಮನಸ್ಸಿನ ಡ್ರಿಲ್ ಸೆಕೆಂಡ್ ನಲ್ಲಿ ಅನುಭವ ಮಾಡಿ. ಹೇಗೆ ಡ್ರಿಲ್ಲನ್ನು ದಿನದಲ್ಲಿ ಒಂದು ಸೆಕೆಂಡಿನಲ್ಲಿ ಪದೇ ಪದೇ ಮಾಡಿ. ಹೇಗೆ ಶರೀರದ ಡ್ರಿಲ್ ಶರೀರವನ್ನು ಶಕ್ತಿಶಾಲಿಯನ್ನಾಗಿ ಮಾಡುತ್ತದೆಯೋ, ಅದೇ ರೀತಿ ಈ ಮನಸ್ಸಿನ ಡ್ರಿಲ್ ಮನಸ್ಸನ್ನು ಶಕ್ತಿಶಾಲಿಯನ್ನಾಗಿ ಮಾಡುವಂತಹದ್ದಾಗಿದೆ. ನಾನು ಫರಿಶ್ತಾ ಆಗಿದ್ದೇನೆ, ಈ ಹಳೆಯ ಪ್ರಪಂಚ, ಹಳೆಯ ದೇಹ, ಹಳೆಯ ದೇಹದ ಸಂಸ್ಕಾರದಿಂದ ಅತೀತ ಫರಿಶ್ತಾ ಆತ್ಮನಾಗಿದ್ದೇನೆ. ಒಳ್ಳೆಯದು!

**ನಾಲ್ಕೂ ಕಡೆಯ ಅತಿ ಸ್ನೇಹಿ, ಸದಾ ಸ್ನೇಹ ಸಾಗರನಲ್ಲಿ ಲವಲೀನ ಆತ್ಮರಿಗೆ, ಸದಾ ಸರ್ವಶಕ್ತಿಗಳ ಅಧಿಕಾರಿ ಶ್ರೇಷ್ಠ ಆತ್ಮರಿಗೆ, ಸದಾ ತಂದೆಯ ಸಮಾನರಾಗುವಂತಹ ತಂದೆಯ ಪ್ರೀತಿಯ ಆತ್ಮರಿಗೆ, ಸದಾ ಸ್ವಮಾನದಲ್ಲಿರುವಂತಹ ಪ್ರತಿಯೊಂದು ಆತ್ಮರಿಗೆ ಗೌರವವನ್ನು ಕೊಡುವಂತಹ, ಸರ್ವರನ್ನು ಮಾನನೀಯ ಮಾಡುವಂತಹ ಆತ್ಮರಿಗೆ, ಸದಾ ಸರ್ವ ಉಪಕಾರಿ ಆತ್ಮರಿಗೆ ಬಾಪ್‌ದಾದಾರವರ ಹೃದಯದ ನೆನಪು, ಪ್ರೀತಿ ಮತ್ತು ಹೃದಯದ ಆಶೀರ್ವಾದಗಳನ್ನು ಸ್ವೀಕಾರ ಮಾಡಿ. ಮತ್ತು ಜೊತೆ ಜೊತೆಗೆ ವಿಶ್ವದ ಮಾಲೀಕ ಆತ್ಮರಿಗೆ ನಮಸ್ತೆ.**

ರಿವೈಸ್ ಕೋರ್ಸ್ 02-11-2004.

***ಉಪಕಾರಿಗಳಾಗಿ ಅಪಕಾರಿಗಳ ಮೇಲೂ ಸಹ ಉಪಕಾರ ಮಾಡಿ, ಸರ್ವಶಕ್ತಿ, ಸರ್ವಗುಣ ಸಂಪನ್ನ, ಗೌರವ ಕೊಡುವಂತಹ ದಾತರಾಗಿ.***

ಸ್ನೇಹವೇ ಈ ದೇಹ ಮತ್ತು ದೇಹದ ಸಂಬಂಧಗಳಿಂದ ಅತೀತರನ್ನಾಗಿ ಮಾಡುತ್ತದೆ. ಸ್ನೇಹವೇ ಮಾಯಾಜೀತರನ್ನಾಗಿ ಮಾಡುತ್ತದೆ. ಎಲ್ಲಿ ಮನಸ್ಸಿನ ಸ್ನೇಹವಿರುತ್ತದೆಯೋ ಅಲ್ಲಿ ಮಾಯೆ ದೂರದಿಂದಲೇ ಓಡಿ ಹೋಗುತ್ತದೆ. ಯಾವ ಶಕ್ತಿಯನ್ನು ಆಹ್ವಾನ ಮಾಡಿದರೂ, ಎಂತಹ ಸಮಯವೋ, ಎಂತಹ ಪರಿಸ್ಥಿತಿಯೋ ಅಂತಹ ಶಕ್ತಿಯು ಕಾರ್ಯದಲ್ಲಿ ಬರಬೇಕು. ಅಂತಹ ಅಧಿಕಾರಿ ಆತ್ಮರಾಗಿದ್ದೀರಾ? ಯಾವಾಗ ಇತರಾತ್ಮರ ಸ್ನೇಹಕ್ಕೆ ಗೌರವವನ್ನು ಕೊಡುತ್ತೀರೋ ಆಗಲೇ ವಿಶ್ವದ ಮುಂದೆ ವಿಶ್ವಕಲ್ಯಾಣಕಾರಿ ಆತ್ಮರಂತೆ ಅನುಭವವಾಗುತ್ತೀರಿ. ಸರ್ವರಿಗೆ ಉಪಕಾರ ಮಾಡಬೇಕೆಂಬ ದೃಷ್ಟಿ, ವೃತ್ತಿ, ಸ್ಮೃತಿ ಇರುತ್ತದೆಯೇ ಎಂದು ಪರಿಶೀಲನೆ ಮಾಡಿಕೊಳ್ಳಿರಿ. ಇತರರಿಗೆ ಉಪಕಾರ ಮಾಡುವುದೇ ಸ್ವ ಉಪಕಾರಿಯಾಗುವುದು ಎನ್ನುತ್ತಾ.. ಸ್ನೇಹ ಸಾಗರನಾದ ಬಾಪ್‌ದಾದಾ ತನ್ನ ಸ್ನೇಹೀ ಮಕ್ಕಳೊಂದಿಗೆ ಮಾತನಾಡುತ್ತಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಮರ್ಥ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಮಾಸ್ಟರ್ ಸರ್ವಶಕ್ತಿವಂತನು, ಶಿವ ಪರಮಾತ್ಮ ನನ್ನ ತಂದೆ.

1. ನನಗೆ ತಂದೆಯಂದಿಗೆ ಇರುವ ಸ್ನೇಹವೇ ನನ್ನನ್ನು ಈ ದೇಹ ಮತ್ತು ದೇಹ ಸಂಬಂಧಗಳಿಂದ ಅತೀತವಾಗಿ ಮಾಯಾಜಿತ್ ಆಗಿ ತಯಾರು ಮಾಡಿದೆ.

2. ಮಾಸ್ಟರ್ ಸರ್ವಶಕ್ತಿವಂತನಾದ ನಾನು ಬಾಪ್‌ದಾದಾರವರ ವಾರಸತ್ವವಾಗಿ ಲಭಿಸಿರುವ ಸರ್ವಶಕ್ತಿಗಳ ಮೇಲೆ ಅಧಿಕಾರಿಯಾಗಿದ್ದೇನೆ.

3. ನನಗೆ ಯಾವ ಸಮಯದಲ್ಲಿ ಯಾವ ಶಕ್ತಿ ಅವಶ್ಯಕತೆಯಿದೆಯೂ ಆ ಶಕ್ತಿ ನನ್ನ ಆದೇಶದನುಸಾರ ಚಿತ್ತ ಪ್ರಭು! ಎನ್ನುತ್ತಾ ಹಾಜರಾಗಿದೆ.

4. ನಾನು ಪ್ರತಿಯೊಂದು ಶ್ರೀಮತವನ್ನು ಚಿತ್ತ ಪ್ರಭು ಎನ್ನುತ್ತಾ ನಡೆಯುವುದರಿಂದ ಸರ್ವಶಕ್ತಿಗಳು ಪ್ರತಿಯೊಂದು ಸಮಯದಲ್ಲಿ ಹಾಜರಾಗುತ್ತಿವೆ.

5. ನಾನು ಸರ್ವಶಕ್ತಿಗಳಿಗೆ ಅಧಿಕಾರಿ, ಸರ್ವ ಗುಣಗಳನ್ನು ತಂದೆಯ ಸಮಾನವಾದ ಸ್ಥಿತಿಯಲ್ಲಿ ಇಟ್ಟುಕೊಂಡಿದ್ದೇನೆ.

6. ನಾನು ಸ್ವಮಾನ ಮತ್ತು ಸನ್ಮಾನದ ಸಮಾನತೆಯನ್ನಿಟ್ಟುಕೊಂಡು ಸ್ವಸ್ಥಿತಿಯ ಮೇಲೆ ವಿಜಯಿಯಾಗಿದ್ದೇನೆ, ಸನ್ಮಾನ (ಗೌರವ)ವನ್ನು ಕೊಡುವ ದಾತನಾಗಿದ್ದೇನೆ.

7. ನಾನು ಬ್ರಹ್ಮಾ ತಂದೆಯ ಸಮಾನವಾಗಿ ಇತರಾತ್ಮರಿಗೆ ಸ್ನೇಹದಿಂದ ಗೌರವವನ್ನು ಕೊಟ್ಟು ವಿಶ್ವದ ಮುಂದೆ ವಿಶ್ವ ಕಲ್ಯಾಣಕಾರಿ ಆತ್ಮನಾಗಿ ಅನುಭವವಾಗಿದ್ದೇನೆ.

8. ನಾನು ಗೌರವವನ್ನು ಕೊಡುವುದರ ಮೂಲಕ ವಿಶ್ವದ ಮುಂದೆ ವಿಧಾತ ಆತ್ಮನಾಗಿ ಬಾಪ್‌ದಾದಾರವರ ಶ್ರೀಮತವನ್ನು (ಶುಭ ಭಾವನೆ, ಶುಭಕಾಮನೆ) ಪಾಲನೆ ಮಾಡುವ ಆಜ್ಞಾಕಾರಿಯಾಗಿ ಸ್ವಮಾನದಲ್ಲಿ ಸಹಜವಾಗಿ ಸ್ಥಿತವಾಗಿದ್ದೇನೆ.

9. ನಾನು ತಂದೆಯನ್ನನುಸರಿಸಿ ಸನ್ಮಾನವನ್ನು ಕೊಟ್ಟು, ಸ್ವಮಾನಧಾರಿಯಾಗಿದ್ದೇನೆ.

10. ನಾನು ಸನ್ಮಾನ ದಾತನಾಗಿ ಸಹಜವಾಗಿ ಸರ್ವಗುಣ ಸಂಪನ್ನವಾಗಿದ್ದೇನೆ.

11. ನಾನು ಸರ್ವರಿಗೆ ಉಪಕಾರ ಮಾಡುವ ಸರ್ವೋಪಕಾರಿ ಎಂಬ ದೃಷ್ಟಿ, ವೃತ್ತಿ, ಸ್ಮೃತಿಯಲ್ಲಿದ್ದೇನೆ.

12. ನಾನು ಬಾಪ್‌ದಾದಾರವರಿಗೆ ರೈಟ್ ಹ್ಯಾಂಡ್ ಆಗಿದ್ದೇನೆ.

13. ಒಂದು ಕ್ಷಣದಲ್ಲಿ ನಾನು ಫರಿಶ್ತೆಯಿಂದ ದೇವತೆಯಾಗುವ ಆತ್ಮಿಕ ಡ್ರಿಲ್ ನ ಅಭ್ಯಾಸವನ್ನು ಮಾಡಿ ಮನಸ್ಸನ್ನು ಶಕ್ತಿಶಾಲಿಯಾಗಿಸಿಕೊಂಡಿದ್ದೇನೆ.